Phone: 08282-257424
E-Mail: kuhrmsection@gmail.com
Fax: 08282-256262
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ – 577 451

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

ಸಂಖ್ಯೆ:ಕುವಿ:ಮಾಸನಿ-3: ೩೩೫೦:2024-25 ದಿನಾಂಕ:12-09-2024

### ಜಾಹೀರಾತು ಪ್ರಕಟಣೆ

ವಿಶ್ವವಿದ್ಯಾಲಯದ ಅಧೀನಕ್ಕೊಳಪಡುವ ಘಟಕ / ನೇರ ಆಡಳಿತಕ್ಕೊಳಪಟ್ಟ ಕಾಲೇಜಿನ 2024-25ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಯ ಈ ಕೆಳಕಂಡ ವಿಷಯಗಳ ಹೆಚ್ಚುವರಿ ಕಾರ್ಯಭಾರಕ್ಕನುಗುಣವಾಗಿ ಅಗತ್ಯವಿರುವ ಅತಿಥಿ ಉಪನ್ಯಾಸಕರುಗಳ ಸೇವೆಯನ್ನು ಪಡೆಯಲು ಯುಜಿಸಿ ನಿಯಮಾನುಸಾರ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**1. ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ**

| ಕ್ರ.ಸಂ. | ವಿಭಾಗ |
|---|---|
| 1 | ಕನ್ನಡ |
| 2 | ಸಂಸ್ಕೃತ |
| 3 | ಇಂಗ್ಲೀಷ್ |
| 4 | ಭಾಷಾಶಾಸ್ತ್ರ |
| 5 | ಹಿಂದಿ |
| 6 | ಉರ್ದು |
| 7 | ಅರ್ಥಶಾಸ್ತ್ರ |
| 8 | ದೈಹಿಕ ಶಿಕ್ಷಣ |
| 9 | ಸಮಾಜ ಕಾರ್ಯ |
| 10 | ರಾಜ್ಯಶಾಸ್ತ್ರ |
| 11 | ಪರಿಸರ ವಿಜ್ಞಾನ |
| 12 | ಪತ್ರಿಕೋದ್ಯಮ |
| 13 | ಶಿಕ್ಷಣ |
| 14 | ಮನಃಶಾಸ್ತ್ರ |
| 15 | ಇತಿಹಾಸ |
| 16 | ಗಣಕ ವಿಜ್ಞಾನ |

**2. ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ**

| ಕ್ರ.ಸಂ. | ವಿಭಾಗ |
|---|---|
| 1. | ಕನ್ನಡ |
| 2. | ಇಂಗ್ಲೀಷ್ |
| 3. | ಉರ್ದು |
| 4. | ಹಿಂದಿ |
| 5. | ಭೌತಶಾಸ್ತ್ರ |
| 6. | ಗಣಿತಶಾಸ್ತ್ರ |
| 7. | ಸಸ್ಯಶಾಸ್ತ್ರ |
| 8. | ಪ್ರಾಣಿಶಾಸ್ತ್ರ |
| 9. | ಎಲೆಕ್ಟ್ರಾನಿಕ್ಸ್ |
| 10. | ಜೈವಿಕ ತಂತ್ರಜ್ಞಾನ |
| 11. | ಸೂಕ್ಷ್ಮಾಣು ಜೀವಶಾಸ್ತ್ರ |
| 12. | ಕಂಪ್ಯೂಟರ್ ಸೈನ್ಸ್ |
| 13. | ಪರಿಸರ ವಿಜ್ಞಾನ / ಪರಿಸರ ಅಧ್ಯಯನ |
| 14. | ಭೂ ವಿಜ್ಞಾನ |
| 15. | ರಸಾಯನಶಾಸ್ತ್ರ |
| 16. | ಜೀವ ರಸಾಯನಶಾಸ್ತ್ರ |
| 17. | ದೈಹಿಕ ಶಿಕ್ಷಣ |
| 18. | ಭಾರತ ಸಂವಿಧಾನ |

3. ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ

| ಕ್ರ.ಸಂ. | ವಿಭಾಗ |
|---|---|
| 1. | ಕನ್ನಡ |
| 2. | ಇಂಗ್ಲೀಷ್ |
| 3. | ಹಿಂದಿ |
| 4. | ಉರ್ದು |
| 5. | ಸಂಸ್ಕೃತ |
| 6. | ಬಿ.ಕಾಂ |
| 7. | ಬಿ.ಬಿ.ಎ / ಬಿ.ಬಿ.ಎ (ಟಿ&ಟಿ) |
| 8. | ದೈಹಿಕ ಶಿಕ್ಷಣ |
| 9. | ಭಾರತ ಸಂವಿಧಾನ |
| 10. | ಪರಿಸರ ಅಧ್ಯಯನ |

4. ವಿಶ್ವವಿದ್ಯಾಲಯ ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಂಕರಘಟ್ಟ (ನೇರ ಆಡಳಿತಕ್ಕೊಳಪಟ್ಟ ಕಾಲೇಜು)

| ಕ್ರ.ಸಂ. | ವಿಭಾಗ |
|---|---|
| 1. | ಕನ್ನಡ |
| 2. | ಇಂಗ್ಲೀಷ್ |
| 3. | ಇತಿಹಾಸ |
| 4. | ಅರ್ಥಶಾಸ್ತ್ರ |
| 5. | ಸಮಾಜಶಾಸ್ತ್ರ |
| 6. | ದೈಹಿಕ ಶಿಕ್ಷಣ |
| 7. | ಬಿ.ಕಾಂ |
| 8. | ಬಿ.ಸಿ.ಎ* |
| 9. | ರಾಜ್ಯಶಾಸ್ತ್ರ |
| 10. | ದೈಹಿಕ ಶಿಕ್ಷಣ |

## ಅಭ್ಯರ್ಥಿಗಳಿಗೆ ಸೂಚನೆ

1. ಅರ್ಜಿಗಳನ್ನು ವಿಶ್ವವಿದ್ಯಾನಿಲಯದ ವೆಬ್ ಸೈಟ್ www.kuvempu.ac.in ನಲ್ಲಿ ತೋರಿಸಿರುವ www.kuvempu.ac.in/eng/guest_application24.php ಲಿಂಕ್‌ನ್ನು ಆಯ್ಕೆ ಮಾಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ:14-09-2024 ರಿಂದ 20-09-2024 ರವರೆಗೆ.

2. **ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಮಾತ್ರ ಭರ್ತಿ ಮಾಡಿದ ಅರ್ಜಿಯ ಭೌತಿಕ ಪ್ರತಿಯನ್ನು (Hard Copy) ದ್ವಿಪ್ರತಿಯಲ್ಲಿ ಎಲ್ಲಾ ದಾಖಲಾತಿಗಳೊಂದಿಗೆ ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ –577451 – ಇವರ ವಿಳಾಸಕ್ಕೆ ದಿನಾಂಕ:21-09-2024 ರಂದು ಸಂಜೆ 4-00 ರೊಳಗಾಗಿ ತಲುಪುವಂತೆ ಕಳುಹಿಸುವುದು.**

3. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವವರ ಭೌತಿಕ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು. ಇನ್ನುಳಿದಂತೆ ಇತರೆ ಮೂಲಗಳಿಂದ ಬರುವ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

4. **ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾದ ಸಹ್ಯಾದ್ರಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ನೇರ ಆಡಳಿತಕ್ಕೊಳಪಟ್ಟ ಕಾಲೇಜಾದ ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜುಗಳಿಗೆ ಸಂಬಂಧಿಸಿದಂತೆ ಒಂದು ವಿಷಯಕ್ಕೆ ಒಂದೇ ಅರ್ಜಿ ಸಲ್ಲಿಸುವುದು.**

5. **ಈ ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಅತಿಥಿ ಉಪನ್ಯಾಸಕರುಗಳಾಗಿ ಸೇವೆ ಸಲ್ಲಿಸಿರುವವರು ಸಹ ಪುನಃ ಅರ್ಜಿ ಸಲ್ಲಿಸುವುದು.**

6. ಅತಿಥಿ ಉಪನ್ಯಾಸಕರುಗಳ ಸೇವೆ ಪಡೆಯುವ ಪ್ರಕ್ರಿಯೆಯ ಅನುಸರಣೆ, ನೇಮಕಾತಿ, ಮೇಲೆ ತಿಳಿಸಲಾದ ಅತಿಥಿ ಉಪನ್ಯಾಸಕರ ಸಂಖ್ಯೆಯು ತಾತ್ಕಾಲಿಕವಾಗಿದ್ದು, ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಪರಿಗಣಿಸಿ ನಿಗದಿಪಡಿಸುವ ಹಾಗೂ ಸಂಭಾವನೆ ಪಾವತಿಗಳು ವಿಶ್ವವಿದ್ಯಾಲಯವು ಕಾಲಾನುಕ್ರಮಕ್ಕನುಗುಣವಾಗಿ ಕೈಗೊಳ್ಳುವ ತೀರ್ಮಾನಗಳಿಗೆ ಒಳಪಟ್ಟಿರುತ್ತದೆ.

7. **ಅತಿಥಿ ಉಪನ್ಯಾಸಕ ಸೇವೆಗೆ ಆಯ್ಕೆಗೊಳ್ಳುವ ಅಭ್ಯರ್ಥಿಗಳಿಗೆ 2024–25ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನುಸಾರ ಬೆಸ ಸೆಮಿಸ್ಟರ್‌ಗೆ 5 ತಿಂಗಳು ಹಾಗೂ ಸಮ ಸೆಮಿಸ್ಟರ್‌ಗೆ 5 ತಿಂಗಳು ಗರಿಷ್ಠ 10 ತಿಂಗಳ ಮಿತಿಗೊಳಪಟ್ಟು ಸಂಭಾವನೆಯನ್ನು ಪಾವತಿಸಲಾಗುತ್ತದೆ.**

8. ಅತಿಥಿ ಉಪನ್ಯಾಸಕರ ಸೇವೆಯು ಕಾಲೇಜುಗಳಲ್ಲಿನ ಹೆಚ್ಚುವರಿ ಬೋಧನಾ ಕಾರ್ಯ ಹಾಗೂ ಶೈಕ್ಷಣಿಕ / ಸೆಮಿಸ್ಟರ್ ಅವಧಿಗೆ ಮಾತ್ರ ಸೀಮಿತವಾಗಿದ್ದು, ಸದರಿ ಅವಧಿಯ ಮುಕ್ತಾಯ ದಿನಾಂಕದಂದು ಸದರಿ ಅತಿಥಿ ಉಪನ್ಯಾಸಕರ ಸೇವೆಯು ತಾನೇ ತಾನಾಗಿ ಯಾವುದೇ ಮುನ್ಸೂಚನೆ ಇಲ್ಲದೆ ರದ್ದಾಗುತ್ತದೆ.

9. ಅತಿಥಿ ಉಪನ್ಯಾಸಕರ ಸೇವೆಯನ್ನು ಯಾವುದೇ ಕಾರಣಕ್ಕೂ ಹಂಗಾಮಿ / ತಾತ್ಕಾಲಿಕ / ಅರೆಕಾಲಿಕ ನೇಮಕಾತಿಯೆಂದು ಪರಿಗಣಿಸುವುದಿಲ್ಲ.

10. ಯುಜಿಸಿ ಪ್ರಕಟಣೆ ದಿನಾಂಕ:18–07–2018 ಮತ್ತು ಯುಜಿಸಿ ಮಾರ್ಗಸೂಚಿ ಪತ್ರ ಸಂಖ್ಯೆ:F.25-1/2018(PS/MISC) dated:28-01-2019ರನ್ವಯ ಅಭ್ಯರ್ಥಿಗಳು ಸಂಬಂಧಿಸಿದ ವಿಷಯದ ಸ್ನಾತಕೋತ್ತರ ಪದವಿಯನ್ನು ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದಿರಬೇಕು ಹಾಗೂ ಯುಜಿಸಿ ನಿಯಮನುಸಾರ ಸಾಮಾನ್ಯ ಹಾಗೂ ಇತರೆ ವರ್ಗದ ಅಭ್ಯಥಿಗಳು ಕನಿಷ್ಠ ಶೇ.55 ಅಂಕಗಳನ್ನು ಹಾಗೂ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳು ಕನಿಷ್ಠ ಶೇ.50 ಅಂಕಗಳನ್ನು ಹೊಂದಿರಬೇಕು. ಎನ್.ಇ.ಟಿ./ ಎಸ್.ಎಲ್.ಇ.ಟಿ./ ಕೆ–ಸೆಟ್ /ಪಿಹೆಚ್.ಡಿ. ಪದವಿಯನ್ನು ಹೊಂದಿರಬೇಕು.

11. ಅತಿಥಿ ಉಪನ್ಯಾಸಕರುಗಳ ಸೇವೆಯನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರದ ನಿಯಮಾನುಸಾರ ಪಡೆಯಲಾಗುವುದು.

12. ಆಯ್ಕೆಯಾದ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಘಟಕ ಕಾಲೇಜು / ನೇರ ಆಡಳಿತಕ್ಕೊಳಪಟ್ಟ ಯಾವುದಾದರು ಕಾಲೇಜುಗಳಲ್ಲಿ ಸೇವೆ ಸಲ್ಲಿಸಲು ಸಿದ್ಧರಿರಬೇಕು.

13. ಸ್ನಾತಕ ವಿಭಾಗಗಳಿಗೆ ಆಯ್ಕೆಯಾಗುವ ಅತಿಥಿ ಉಪನ್ಯಾಸಕರು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾದರೆ, ಪಾಠ ಪ್ರವಚನಗಳನ್ನು ಸರಿಯಾಗಿ ನಿರ್ವಹಿಸದಿದ್ದರೆ ಅವರ ವಿರುದ್ಧ ಗಂಭೀರ ಆರೋಪಗಳು ಕೇಳಿ ಬಂದಲ್ಲಿ, ಅಥವಾ ಕರ್ತವ್ಯ ಲೋಪ / ಅಶಿಸ್ತು ಕಂಡುಬಂದಲ್ಲಿ ಅಂತಹ ಅತಿಥಿ ಉಪನ್ಯಾಸಕರನ್ನು ಸೇವೆಯಿಂದ ವಜಾಗೊಳಿಸಲಾಗುವುದು.

14. ವಿದ್ಯಾರ್ಹತೆ ಹಾಗೂ ಜಾತಿ/ವರ್ಗ ಪ್ರಮಾಣ ಪತ್ರಗಳಿಗೆ ಸಂಬಂಧಪಟ್ಟ ಅಧಿಕೃತ ದಾಖಲಾತಿಗಳ ದೃಢೀಕರಣದ ಪ್ರತಿಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

15. ಲಕೋಟೆಯ ಮೇಲೆ **ಸ್ನಾತಕ _______ ವಿಷಯದ ಅತಿಥಿ ಉಪನ್ಯಾಸಕರ ಸೇವೆಗೆ** ಅರ್ಜಿ ಸಲ್ಲಿಸಲಾಗಿದೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

16. ಅರ್ಜಿ ಶುಲ್ಕದ ವಿವರ

| **ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1** | ಸಾಮಾನ್ಯ ವರ್ಗ | ವಿಕಲಚೇತನ ಅಭ್ಯರ್ಥಿಗಳು |
|---|---|---|
| ರೂ. 100–00 | ರೂ. 200–00 | ಯಾವುದೇ ಶುಲ್ಕ ಇರುವುದಿಲ್ಲ |

**17.** ಅರ್ಜಿ ಶುಲ್ಕವನ್ನು ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ ಇವರು ಯೋಜನೇತರ ಶೀರ್ಷಿಕೆಯಡಿ ಎಸ್.ಬಿ.ಐ. ಜ್ಞಾನ ಸಹ್ಯಾದ್ರಿ ಶಾಖೆಯಲ್ಲಿ ಹೊಂದಿರುವ ಖಾತೆ ಸಂಖ್ಯೆ: 54023036291, ಐಎಫ್‌ಎಸ್‌ಸಿ ಕೋಡ್ SBIN0040759ಗೆ ಎಲ್ಲಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗಳಲ್ಲಿಯೂ ಚಲನ್ ಮೂಲಕ ಪಾವತಿಸಬಹುದಾಗಿರುತ್ತದೆ. ಶುಲ್ಕ ಪಾವತಿಯ ವಿವರಗಳನ್ನು ಅರ್ಜಿಯಲ್ಲಿ ನಮೂದಿಸಿ ಚಲನ್ ಪ್ರತಿಯನ್ನು ಲಗತಿಸತಕ್ಕದ್ದು. **ಡಿ.ಡಿ.ಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ.**

18. ಮೇಲ್ಕಂಡ ವಿಷಯಗಳಿಗೆ ಹೆಚ್ಚುವರಿ ಕಾರ್ಯಭಾರಕ್ಕನುಗುಣವಾಗಿ ಅಗತ್ಯವಿರುವ ಒಟ್ಟು ಅತಿಥಿ ಉಪನ್ಯಾಸಕರುಗಳ ಸಂಖ್ಯೆಗನುಗುಣವಾಗಿ ಸರ್ಕಾರದ ಪ್ರಚಲಿತ ಆದೇಶದನ್ವಯ (SC, ST, HYK ಮಾತ್ರ) ರೋಸ್ಟರ್ ನಿಯಮವನ್ನು ಪಾಲಿಸಲಾಗುವುದು.

**ವಿಶೇಷ ಸೂಚನೆ:** ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಪ್ರತ್ಯೇಕ ಪತ್ರಗಳನ್ನು ಕಳುಹಿಸಲಾಗುವುದಿಲ್ಲ. ಸಂದರ್ಶನ ದಿನಾಂಕ ಮತ್ತು ಇತರೆ ಮಾಹಿತಿಗಳಿಗೆ ವಿಶ್ವವಿದ್ಯಾಲಯದ ವೆಬ್ ಸೈಟ್ **www.kuvempu.ac.in** ನ್ನು ಗಮನಿಸಬಹುದು.

ಆದೇಶದ ಮೇರೆಗೆ

12/9/24

ಕುಲಸಚಿವ

ಕುಲಸಚಿವ
ಕುವೆಂಪು ವಿಶ್ವವಿದ್ಯಾಲಯ
ಜ್ಞಾನ ಸಹ್ಯಾದ್ರಿ

12/9/24

ಗೆ:

1. ಅಧ್ಯಕ್ಷರು / ಸಂಯೋಜನಾಧಿಕಾರಿಗಳು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ / ಶಿವಮೊಗ್ಗ / ಕಡೂರು.
2. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಕಡೂರು.
3. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಐ.ಡಿ.ಎಸ್.ಜಿ. ಕಾಲೇಜು ಆವರಣ, ಚಿಕ್ಕಮಗಳೂರು.
4. ಪ್ರಾಚಾರ್ಯರು, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ – ಮಾಹಿತಿಗಾಗಿ ಹಾಗೂ ಸದರಿ ಮಾಹಿತಿಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲದಿಂದ ಪಡೆದು ತಮ್ಮ ವಿಭಾಗದ ಪ್ರಕಟಣ ಫಲಕದಲ್ಲಿ ಪ್ರಕಟಿಸಲು.
5. ಪ್ರಾಚಾರ್ಯರು, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ – ಮಾಹಿತಿಗಾಗಿ ಹಾಗೂ ಸದರಿ ಮಾಹಿತಿಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲದಿಂದ ಪಡೆದು ತಮ್ಮ ವಿಭಾಗದ ಪ್ರಕಟಣ ಫಲಕದಲ್ಲಿ ಪ್ರಕಟಿಸಲು.
6. ಪ್ರಾಚಾರ್ಯರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ – ಮಾಹಿತಿಗಾಗಿ ಹಾಗೂ ಸದರಿ ಮಾಹಿತಿಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲದಿಂದ ಪಡೆದು ತಮ್ಮ ವಿಭಾಗದ ಪ್ರಕಟಣ ಫಲಕದಲ್ಲಿ ಪ್ರಕಟಿಸಲು.
7. ಪ್ರಾಚಾರ್ಯರು, ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಂಕರಘಟ್ಟ – ಮಾಹಿತಿಗಾಗಿ ಹಾಗೂ ಸದರಿ ಮಾಹಿತಿಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲದಿಂದ ಪಡೆದು ತಮ್ಮ ವಿಭಾಗದ ಪ್ರಕಟಣ ಫಲಕದಲ್ಲಿ ಪ್ರಕಟಿಸಲು.
8. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
9. ಆಪ್ತ ಕಾರ್ಯಾಲಯ:- ಮಾನ್ಯ ಕುಲಪತಿಗಳು / ಕುಲಸಚಿವರು / ಕುಲಸಚಿವರು (ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
10. ನಿರ್ದೇಶಕರು, ಯುಸಿಸಿಎಫ್ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
11. ಕಛೇರಿ ಪ್ರತಿ.